# ಜಿಲ್ಲಾ ಪಂಚಾಯಿತಿ, ತುಮಕೂರು

**ದಿನಾಂಕ 06-07-2013 ರಂದು ಮಧ್ಯಾಹ್ನ 3.00ಗಂಟೆಗೆ ಶ್ರೀಮತಿ ಪ್ರೇಮ ಮಹಾಲಿಂಗಪ್ಪ, ಮಾನ್ಯ ಆಧ್ಯಕ್ಷರು, ಜಿಲ್ಲಾ ಪಂಚಾಯತ್, ತುಮಕೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಯೋಜನಾ ಸಮಿತಿ ಸಭೆಯ ನಡವಳಿಗಳು.**

ಹಾಜರಾತಿ:

1. ಶ್ರೀಮತಿ ಪ್ರೇಮಾ ಮಹಾಲಿಂಗಪ್ಪರವರು, ಮಾನ್ಯ ಅಧ್ಯಕ್ಷರು, ಜಿಲ್ಲಾ ಯೋಜನಾ ಸಮಿತಿ
2. ಶ್ರೀ ಜಿ.ಎಸ್. ಬಸವರಾಜು, ,ಮಾನ್ಯ ಲೋಕಸಭಾ ಸದಸ್ಯರು, ತುಮಕೂರು ಕ್ಷೇತ್ರ
3. ಶ್ರೀ ಷಡಕ್ಷರಿ, ಮಾನ್ಯ ವಿಧಾನಸಭಾ ಸದಸ್ಯರು, ತಿಪಟೂರು ಕ್ಷೇತ್ರ
4. ಶ್ರೀ ಪಿ.ಆರ್.ಸುಧಾಕರ್ ಲಾಲ್, ಮಾನ್ಯ ವಿಧಾನಸಭಾ ಸದಸ್ಯರು, ಕೊರಟಗೆರೆ ಕ್ಷೇತ್ರ
5. ಶ್ರೀ ಸಿ.ಆರ್.ಉಮೇಶ್, ಮಾನ್ಯ ಸದಸ್ಯರು, ಜಿಲ್ಲಾ ಯೋಜನಾ ಸಮಿತಿ
6. ಶ್ರೀಮತಿ ಲಲಿತಮ್ಮ ಮಂಜುನಾಥ, ಮಾನ್ಯ ಸದಸ್ಯರು, ಜಿಲ್ಲಾ ಯೋಜನಾ ಸಮಿತಿ
7. ಶ್ರೀಮತಿ ಯಶೋಧ ಶ್ರೀನಿವಾಸ್, ಮಾನ್ಯ ಸದಸ್ಯರು, ಜಿಲ್ಲಾ ಯೋಜನಾ ಸಮಿತಿ
8. ಶ್ರೀ ಎ.ಬಿ.ಜಗದೀಶ್ , ಮಾನ್ಯ ಸದಸ್ಯರು, ಜಿಲ್ಲಾ ಯೋಜನಾ ಸಮಿತಿ
9. ಶ್ರೀ ಬಿ.ಕೆ.ಬಡೀರಣ್ಣ, ಮಾನ್ಯ ಸದಸ್ಯರು, ಜಿಲ್ಲಾ ಯೋಜನಾ ಸಮಿತಿ
10. ಶ್ರೀಮತಿ ಕೆ.ಎಸ್.ನಳಿನಿ, ಮಾನ್ಯ ಸದಸ್ಯರು, ಜಿಲ್ಲಾ ಯೋಜನಾ ಸಮಿತಿ
11. ಶ್ರೀಮತಿ ಹೆಚ್.ಬಿ.ರಾಧ, ಮಾನ್ಯ ಸದಸ್ಯರು, ಜಿಲ್ಲಾ ಯೋಜನಾ ಸಮಿತಿ
12. ಶ್ರೀಮತಿ ಯಶೋದ ಗಂಗರಾಜು, ಮಾನ್ಯ ಸದಸ್ಯರು, ಜಿಲ್ಲಾ ಯೋಜನಾ ಸಮಿತಿ
13. ಶ್ರೀ ಹೆಚ್.ಎಸ್. ರವಿಶಂಕರ್ , ಮಾನ್ಯ ಸದಸ್ಯರು, ಜಿಲ್ಲಾ ಯೋಜನಾ ಸಮಿತಿ
14. ಶ್ರೀ ಅರಣ್ ಕುಮಾರ್ ವೈ.ವಿ. ಮಾನ್ಯ ಸದಸ್ಯರು, ಜಿಲ್ಲಾ ಯೋಜನಾ ಸಮಿತಿ
15. ಶ್ರೀಮತಿ ಶಾರದ ಎನ್ ನರಸಿಂಹಮೂರ್ತಿ, ಮಾನ್ಯ ಸದಸ್ಯರು, ಜಿಲ್ಲಾ ಯೋಜನಾ ಸಮಿತಿ
16. ಶ್ರೀಮತಿ ಹೆಚ್.ಬಿ.ರಾಧ, ಮಾನ್ಯ ಸದಸ್ಯರು, ಜಿಲ್ಲಾ ಯೋಜನಾ ಸಮಿತಿ
17. ಶ್ರೀ ವೈ.ಹೆಚ್.ಹುಚ್ಚಯ್ಯ, ಮಾನ್ಯ ಸದಸ್ಯರು, ಜಿಲ್ಲಾ ಯೋಜನಾ ಸಮಿತಿ
18. ಶ್ರೀ ಗೋವಿಂದರಾಜು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾಗೂ ಸದಸ್ಯ ಕಾರ್ಯದರ್ಶಿ, ಜಿಲ್ಲಾ ಯೋಜನಾ ಸಮಿತಿ

**ಜಿಲ್ಲಾ /ತಾಲ್ಲೂಕು ಮಟ್ಟದ ಅಧಿಕಾರಿಗಳು:-**

ಹಾಜರಾತಿ ವಹಿಯಂತೆ

***

ಸಭೆಯ ಪ್ರಾರಂಭದಲ್ಲಿ ಮುಖ್ಯ ಯೋಜನಾಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ಜಿಲ್ಲಾ ಪಂಚಾಯತ್ ನ ಮಾನ್ಯ ಅಧ್ಯಕ್ಷರು, ಮಾನ್ಯ ಲೋಕಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ಜಿಲ್ಲಾ ಯೋಜನಾ ಸಮಿತಿ ಸದಸ್ಯರು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ/ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಪತ್ರಿಕಾ ಮಾಧ್ಯಮದವರನ್ನು ಸಭೆಗೆ ಸ್ವಾಗತಿಸಿ, ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು.

ಮಾನ್ಯ ಸಭಾಧ್ಯಕ್ಷರು ಇತ್ತೀಚೆಗೆ ಉತ್ತರಾಖಂಡ ರಾಜ್ಯದಲ್ಲಿ ಉಂಟಾದ ಜಲಪ್ರಳಯ ದಲ್ಲಿ ಸುಮಾರು 10-15 ಸಾವಿರ ಜನರು ಮರಣ ಹೊಂದಿರುವ ಪ್ರಯುಕ್ತ ಸಭೆಯಲ್ಲಿ 2 ನಿಮಿಷ ಮೌನವನ್ನು ಆಚರಿಸುವಂತೆ ಸೂಚಿಸಿದ್ದರ ಮೇರೆಗೆ 2 ನಿಮಿಷ ಮೌನ ಆಚರಿಸಲಾಯಿತು.

**ವಿಷಯ ಸೂಚಿ:-**

## 1. ಜಿಲ್ಲಾ ಸಮಗ್ರ ಅಭಿವೃದ್ಧಿ ಯೋಜನೆ (ಸಿ.ಡಿ.ಡಿ.ಪಿ) ತಯಾರಿಸುವ ಬಗ್ಗೆ ಚರ್ಚೆ (2012-13 ರಿಂದ 2016-17)

ಮುಖ್ಯ ಯೋಜನಾಧಿಕಾರಿಗಳು ಮಾತನಾಡಿ ಜಿಲ್ಲಾ ಸಮಗ್ರ ಅಭಿವೃದ್ಧಿ ಯೋಜನೆ (ಸಿ.ಡಿ.ಡಿ.ಪಿ.) ತಯಾರಿಕೆ ಕಾರಣಾಂತರಗಳಿಂದ ವಿಳಂಬವಾಗಿದೆ, ಇದು 5 ವರ್ಷಗಳ ಯೋಜನೆ, ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯ ಪ್ರಕಾರ ಯೋಜನೆಗಳು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ಮಟ್ಟದಲ್ಲಷ್ಟೇ ಅಲ್ಲದೆ ನಗರ ಸ್ಥಳೀಯ ಸಂಸ್ಥೆಗಳಲ್ಲಿಯೂ ರೂಪಿತವಾಗಿ ಜಿಲ್ಲಾ ಮಟ್ಟದಲ್ಲಿ ಕ್ರೋಢೀಕೃತ ವಾಗಬೇಕಿರುತ್ತದೆ, ಸದರಿ ಜಿಲ್ಲಾ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಜಿಲ್ಲಾ ಯೋಜನಾ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಸದರಿ ಯೋಜನೆ ತಯಾರಿಸುವ ಸಂಬಂಧ ಪರಿಣಿತ ತಾಂತ್ರಿಕ ನೆರವು ಸಂಸ್ಥೆಯ ಸೇವೆಯನ್ನು ಪಡೆಯಲು ಅವಕಾಶವಿರುತ್ತದೆ ಎಂದು ಸಭೆಗೆ ವಿವರಿಸಿ, ಈ ವಿಷಯವಾಗಿ ಈ ಸಭೆಗೆ ಇಂಟರ್ ಫೇಸ್ ಇಂಡಿಯ ಡೆವಲಪ್ ಮೆಂಟ್ ಕನ್ಸಲ್ಟೆಂಟ್ ಸಂಸ್ಥೆಯ ನಿರ್ದೇಶಕರಾದ ಶ್ರೀ ಡಾ:ಕೀರ್ತಿಶೇಖರ್ ರವರು ಸಭೆಗೆ ಮಾಹಿತಿ ನೀಡಲಿದ್ದಾರೆ ಎಂದರು.

ಡಾ:ಕೀರ್ತಿಶೇಖರ್, ನಿರ್ದೇಶಕರು, ಐ.ಐ.ಡಿ.ಸಿ ಇವರು ಮಾತನಾಡಿ ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆ ತಯಾರಿಕೆಗೆ ಸಂಬಂಧಿಸಿದಂತೆ ಸಂಕ್ಷಿಪ್ತವಾಗಿ ವಿವರ ನೀಡಿ ಇದು ಐದು ವರ್ಷಗಳಿಗೊಮ್ಮೆ ಕೈಗೊಳ್ಳುವ ಪ್ರಕ್ರಿಯೆ, 11ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಐಸ್ಯಾಕ್ ಸಂಸ್ಥೆ ಸಿಡಿಡಿಪಿ ವರದಿ ತಯಾರು ಮಾಡಿತ್ತು.12ನೇ ಪಂಚವಾರ್ಷಿಕ ಯೋಜನೆ ಅವಧಿಗೆ ಸಿ.ಡಿ.ಡಿ.ಪಿ ತಯಾರಿಸಬೇಕಾಗಿರುತ್ತದೆ. ಪಂಚವಾರ್ಷಿಕ ಯೋಜನೆಗಳಲ್ಲಿ ದೀರ್ಘ ಕಾಲದ ಗುರಿಯಿಟ್ಟು ಕೊಂಡು ಪರಿಣಾಮಕಾರಿಯಾಗಿ ಮತ್ತು ಜನಪರವಾಗಿ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಇದಕ್ಕೆ ಪೂರಕವಾಗಿ ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರ ಸುತ್ತೋಲೆಗಳನ್ನು ಹೊರಡಿಸಿದೆ, ಗ್ರಾಮ ಪಂಚಾಯಿತಿ ಕೆಳಸ್ತರ ಸಂಸ್ಥೆಯಾಗಿದ್ದು, ಯೋಜನೆಗಳು ಮೊದಲು ಇಲ್ಲಿ ತಯಾರಾಗಬೇಕು ಈ ಪ್ರಕ್ರಿಯೆಯಲ್ಲಿ ಗ್ರಾಮದ ಜನರು ಭಾಗವಹಿಸಬೇಕಾಗುತ್ತದೆ. ಯೋಜನೆ ಗಳನ್ನು ತಯಾರಿಸುವಾಗ 3 ವಲಯಗಳನ್ನು ಅಂದರೆ 1)ಉತ್ಪಾದನಾ ವಲಯ2)ಸಾಮಾಜಿಕ ವಲಯ 3)ಮೂಲಭೂತಸೌಕರ್ಯ ವಲಯ ಈ 3 ವಲಯಗಳನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾ ಸಮಗ್ರ ಅಭಿವೃದ್ಧಿ ಯೋಜನೆ ತಯಾರಿಸಬೇಕಾಗುತ್ತದೆ ಎಂದರು.

ಜಿಲ್ಲಾ ಯೋಜನೆ ಎಂದರೆ ಸ್ಥಳೀಯ ಮಟ್ಟದಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಲೆಕ್ಕಹಾಕಿ ಅದನ್ನು ಆಧಾರವಾಗಿಟ್ಟುಕೊಂಡು ಯೋಜನೆ ರೂಪಿಸಬೇಕು, ಕಾರಣ ಮೊದಲು ಸಂಪನ್ಮೂಲಗಳ ಪಟ್ಟಿ ಮಾಡಬೇಕಾಗುತ್ತದೆ, ಇದು ಜಿಲ್ಲೆಯ ಎಲ್ಲಾ ನಗರ/ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಒಳಗೊಂಡಂತೆ ಯೋಜನೆಯಾಗಿದ್ದು, ಈ ಕೆಳಕಂಡ ಚಟುವಟಿಕೆಗಳ ಆಧಾರದ ಮೇಲೆ ಯೋಜನೆಯನ್ನು ಸಿದ್ಧಪಡಿಸಲಾಗುವುದು ಎಂದರು.

1) ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿನ ಅಧಿಕಾರಿಗಳಿಗೆ ಓರಿಯಂಟೇಷನ್ ತರಬೇತಿ.
2) ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಾಹಿತಿ ಸಂಗ್ರಹಣೆ.
3) ತಾಲ್ಲೂಕು ಮತ್ತು ನಗರ ಸ್ಥಳೀಯ ಸಂಸ್ಥೆಯ ಮಟ್ಟದಲ್ಲಿ ಮಾಹಿತಿ ಕ್ರೋಢಿಕರಣ.
4) ಜಿಲ್ಲಾ ಮಟ್ಟದಲ್ಲಿ ವಿವಿಧ ಇಲಾಖೆಗಳ ಕಾರ್ಯಕ್ರಮವಾರು ಯೋಜನೆ ತಯಾರಿಕೆ.

ಈ ರೀತಿಯಾಗಿ ಜಿಲ್ಲಾ ಸಮಗ್ರ ಅಭಿವೃದ್ಧಿ ಯೋಜನೆಯನ್ನು ತಯಾರಿಸಿ, ಕರಡು ಯೋಜನೆಯನ್ನು ಜಿಲ್ಲಾ ಯೋಜನಾ ಸಮಿತಿಯ ಅಂಗೀಕಾರಕ್ಕಾಗಿ ಮಂಡಿಸಲಾಗುವುದೆಂದು ತಿಳಿಸಿದರು.

ಮುಂದುವರೆದು ಮಾತನಾಡಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಂಬಂಧಿಸಿದ ಅಧಿಕಾರಿಗಳ, ಜನಪ್ರತಿನಿಧಿಗಳ ಸಮುದಾಯ ಮುಖಂಡರು, ಸಂಘಸಂಸ್ಥೆಗಳು ಮತ್ತು ಗ್ರಾಮಸ್ಥರೊಂದಿಗೆ ಪೂರ್ವಬಾವಿ ಸಭೆ ನಡೆಸಿ ಯೋಜನೆ ಉದ್ದೇಶ ಹಾಗೂ ಪ್ರಾಮುಖ್ಯತೆ ಬಗ್ಗೆ ಮನವರಿಕೆ ಮಾಡಿ, ನಂತರ ವಲಯವಾರು ತಂಡಗಳನ್ನು ಅಂದರೆ ಉತ್ಪಾದನಾ ವಲಯ, ಸಾಮಾಜಿಕ ವಲಯ ಹಾಗೂ ಮೂಲಭೂತ ಸೌಕರ್ಯದಲ್ಲಿ ರಚಿಸಿ ಅ ನಂತರ ಗ್ರಾಮಗಳಲ್ಲಿ ಸಂಬಂಧಿಸಿದ ಇಲಾಖಾ ಕಾರ್ಯಕ್ರಮಗಳ ಅನುಷ್ಠಾನ ಕುರಿತು ಚರ್ಚಿಸಬೇಕು, ತದನಂತರ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳನ್ನು ಏರ್ಪಡಿಸಿ ಬೇಡಿಕೆಪಟ್ಟಿ ಸಿದ್ದಪಡಿಸಬೇಕು. ಸದರಿ ಬೇಡಿಕೆ ಪಟ್ಟಿಗಳು ಗ್ರಾಮ ಸಭೆಯಲ್ಲಿ ಅನುಮೋದನೆಯಾದ ನಂತರ ಅವುಗಳನ್ನು ಆದ್ಯತೆ ಮೇರೆಗೆ ವರ್ಷವಾರು ಪಟ್ಟಿಯಡಿ ಜನಯೋಜನೆ ತಯಾರಿಸಬೇಕು. ಇದೇರೀತಿ ತಾಲ್ಲೂಕುಮಟ್ಟದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ಯೋಜನೆ ತಯಾರಿಸಬೇಕು ಎಂದರು.

ಮಾನ್ಯ ಜಿಲ್ಲಾ ಯೋಜನಾ ಸಮಿತಿ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ ಉತ್ಪಾದನಾ ವಲಯದಡಿ ಜಿಲ್ಲಾ ಮಟ್ಟದಲ್ಲಿ ಕೃಷಿ ಅವಲಂಬಿತ ಉತ್ಪನ್ನಗಳಿಗೆ ಅಯಾ ಪ್ರದೇಶಗಳಿಗೆ ಅನುಗುಣವಾಗಿ ಆವರ್ತ ನಿಧಿ ಸ್ಥಾಪಿಸಲು ಅವಕಾಶವಿದೇಯೇ? ಬೆಲೆ ಸ್ಥಿರತೆ ಕಾಪಾಡಲು ಜಿಲ್ಲಾ ಪಂಚಾಯಿತಿಗಳಲ್ಲಿ ಯಾವ ಸಂಪನ್ಮೂಲದಿಂದ ಆವರ್ತ ನಿಧಿ ಭರಿಸಬೇಕು, ಇದಕ್ಕೆ ವಿಶೇಷ ಪ್ರಸ್ತಾವನೆ ಸಲ್ಲಿಸಬಹುದೇ ಎಂದು ಪ್ರಸ್ತಾಪಿಸಿದರು. ಡಾ:ಕೀರ್ತಿಶೇಖರ್, ರವರು ಮಾತನಾಡಿ ಜಿಲ್ಲಾ ಮಟ್ಟದಲ್ಲಿ ಕೃಷಿ ಅವಲಂಬಿತ ಉತ್ಪನ್ನಗಳಿಗೆ ಅಯಾ ಪ್ರದೇಶಗಳಿಗೆ ಅನುಗುಣವಾಗಿ ಆವರ್ತ ನಿಧಿ ಸ್ಥಾಪಿಸಲು ಜಿಲ್ಲಾ ಸಮಗ್ರ ಅಭಿವೃದ್ಧಿ ಯೋಜನೆಯಡಿ ಅವಕಾಶ ಮಾಡಿಕೊಳ್ಳಬಹುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿಲ್ಲಾ ಯೋಜನಾ ಸಮಿತಿ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯರವರು ಮಾತನಾಡಿ ಜಿಲ್ಲಾ ಯೋಜನಾ ಸಮಿತಿ ಸಭೆಯನ್ನು ನಡೆಸುತ್ತೇವೆ, ಆದರೆ ಈ ಸಮಿತಿ ಸಭೆಗಳನ್ನು ನಡೆಸುವುದರಿಂದ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಇದರಿಂದ ಹೇಗೆ ಸಹಕಾರಿಯಾಗುತ್ತದೆ. ಯೋಜನೆಗಳನ್ನು 5 ವರ್ಷಕ್ಕೊಮ್ಮೆ ತಯಾರಿಸುವುದು, ಅನುದಾನವನ್ನು ವರ್ಷಕ್ಕೊಮ್ಮೆ ನೀಡುವುದು ಸರಿಯೇ ಎಂದು ಪ್ರಶ್ನಿಸಿದರು. ಮುಖ್ಯ ಯೋಜನಾಧಿಕಾರಿಗಳು ಮಾತನಾಡಿ ಅಭಿವೃದ್ಧಿ ಯೋಜನೆಗಳನ್ನು ವರ್ಷಕ್ಕೊಮ್ಮೆ ತಯಾರಿಸಿ ಅನುಷ್ಠಾನಗೊಳಿಸುವುದು, ಅಷ್ಟು ವೈಜ್ಞಾನಿಕವಲ್ಲ. ಕನಿಷ್ಟಪಕ್ಷ 5 ವರ್ಷಗಳಿಗೆ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿ ಗ್ರಾಮವಾರು, ಗ್ರಾಮ ಪಂಚಾಯಿತಿವಾರು ಬೇಡಿಕೆಗಳನ್ನು ವಾರ್ಡ್ ಸಭೆ ಮತ್ತು ಗ್ರಾಮಸಭೆಗಳ ಮುಖಾಂತರ ಗುರುತಿಸಿ ವರ್ಷವಾರು ಕಾಮಗಾರಿಗಳ ಆಧ್ಯತಾಪಟ್ಟಿ ತಯಾರಿಸಿ ಇದಕ್ಕೆ ಸಂಪನ್ಮೂಲಗಳನ್ನು ಕ್ರೋಡೀಕರಿಸಿ ವಿವಿಧ ಯೋಜನೆಗಳಡಿ ಅನುದಾನ ಹೊಂದಾಣಿಕೆ ಮಾಡಿ ಕಾಮಗಾರಿ/ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದಲ್ಲಿ ಗ್ರಾಮವಾರು, ಗ್ರಾಮ ಪಂಚಾಯಿತಿವಾರು ಅಭಿವೃದ್ಧಿ ಸಾಧಿಸಬಹುದು ಎಂದು ಸರ್ಕಾರ ಚಿಂತನೆ ಮಾಡಿ, ಇದಕ್ಕೆ ಸಂವಿಧಾನದ ಮಹತ್ವ ನೀಡಿ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಲು ಕ್ರಮವಹಿಸಲಾಗುತ್ತಿದೆ ಎಂದು ಸಭೆಗೆ ವಿವರಿಸಿದರು.

ಮಾನ್ಯ ಜಿಲ್ಲಾ ಯೋಜನಾ ಸಮಿತಿ ಸದಸ್ಯರಾದ ಸಿ.ಆರ್.ಉಮೇಶ್ ರವರು ಮಾತನಾಡಿ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾದರೆ ಮೊದಲು ಕಾರ್ಯವಿಧಾನ ರೂಪಿಸಬೇಕು. ಮೊದಲು ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ಜಿಲ್ಲಾ ಯೋಜನಾ ಸಮಿತಿಯನ್ನು ಹೆಚ್ಚು ಕ್ರಿಯಾಶೀಲವಾಗಿ ಮಾಡಬೇಕು. ಇದರಿಂದ ರಾಜ್ಯ/ಕೇಂದ್ರ ಮಟ್ಟದಲ್ಲಿಯೂ ಸಹ ಹಣಕಾಸಿನ ನೆರವು ದೊರೆಯುತ್ತದೆ. ಈ ನಿಟ್ಟಿನಲ್ಲಿ ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಡಿಪಿಸಿ ಸೆಲ್ ಮಾಡಿದರೆ, ಪರಿಣಾಮಕಾರಿಯಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಹಕಾರಿಯಾಗುತ್ತದೆಂದು ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಜಿಲ್ಲೆಯಲ್ಲಿ ಹಸುಗೂಸು, ಬಾಣಂತಿಯರ ಮರಣ, ಅಪೌಷ್ಟಿಕತೆ ತಡೆಯಲು ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆಯಡಿ ಪ್ರತ್ಯೇಕ ನಿಧಿ ಸ್ಥಾಪಿಸುವ ಅವಶ್ಯಕತೆ ಇರುವುದರಿಂದ ಸಂಪನ್ಮೂಲ ಕ್ರೋಢಿಕರಣಕ್ಕೆ ಅಧಿಕಾರಿಗಳು ಕ್ರಮವಹಿಸುವಂತೆ ತಿಳಿಸಿದರು. ಮುಖ್ಯ ಯೋಜನಾಧಿಕಾರಿಗಳು ಮಾತನಾಡಿ ಜಿಲ್ಲಾ ಯೋಜನಾ ಸಮಿತಿಗೆ ಪಂಚಾಯತ್ ರಾಜ್ ಸಂಸ್ಥೆಗಳು, ನಗರ ಸ್ಥಳೀಯ ಸಂಸ್ಥೆಗಳು ವಾರ್ಷಿಕ ವಂತಿಕೆ ನೀಡುತ್ತವೆ. ಅದರಲ್ಲಿ ಗ್ರಾಮ ಪಂಚಾಯಿತಿ ರೂ. 5000/- , ತಾಲ್ಲೂಕು ಪಂಚಾಯಿತಿ ರೂ.25000/- ಜಿಲ್ಲಾ ಪಂಚಾಯಿತಿಯಿಂದ ರೂ.2.00 ಲಕ್ಷ, ಪಟ್ಟಣ ಪಂಚಾಯಿತಿ ರೂ.7500/-, ಪುರಸಭೆ ರೂ.25000/-, ನಗರಸಭೆ ರೂ.1.00 ಲಕ್ಷ ನೀಡಬೇಕಾಗಿದ್ದು, ಈವರೆಗೆ ಕೇವಲ ರೂ. 37.00 ಲಕ್ಷ ಮಾತ್ರ ವಂತಿಕೆ ಬಂದಿದ್ದು, ಈ ವಂತಿಕೆಯಿಂದ ಜಿಲ್ಲಾ ಯೋಜನಾ ಸಮಿತಿಯ ಕಾರ್ಯ ವ್ಯಾಪ್ತಿಗೆ ಸಂಬಂಧಿಸಿದಂತೆ ವೆಚ್ಚ ಭರಿಸಬಹುದಾಗಿದೆ ಎಂದರು.

ಜಿಲ್ಲಾ ಯೋಜನಾ ಸಮಿತಿಯ ಮಾನ್ಯ ಸದಸ್ಯರಾದ ವೈ.ಹೆಚ್.ಹುಚ್ಚಯ್ಯರವರು ಮಾತನಾಡಿ ಸ್ಥಳೀಯ ಸಂಸ್ಥೆಗಳ ಸಮಸ್ಯೆಗಳ ಬಗ್ಗೆ ವಿಶಾಲ ದೃಷ್ಟಿಕೋನದಿಂದ ಯೊಜನೆ ಮಾಡಿ 5 ವರ್ಷಗಳಲ್ಲಿ ಯಾವ ರೀತಿ ಹಂತಹಂತವಾಗಿ ಅನಷ್ಠಾನಗೊಳಿಸಬೇಕೆಂದು ಹಾಗೂ ಜಿಲ್ಲಾ ಯೋಜನಾ ಸಮಿತಿ ಮೂಲಕ ಪ್ರತಿ ವರ್ಷ ಸನ್ನಿವೇಶಕ್ಕೆ ತಕ್ಕಂತೆ ಯೋಜನೆಗಳು ಬದಲಾಗಬೇಕು. ನಮಗೆ ಜಿಲ್ಲಾ ವಲಯ ಯೋಜನೆಯಲ್ಲಿ ವಾರ್ಷಿಕ ಕ್ರಿಯಾ ಯೋಜನೆ ರೂಪಿಸಿ ಸಕಾರಾತ್ಮಕವಾಗಿ ಚಿಂತಿಸಿ, ಸಮರ್ಥ ಅಧಿಕಾರಿಗಳ ಪಡೆ ಇರುವುದರಿಂದ ಪಂಚವಾರ್ಷಿಕ ಯೋಜನೆಗಳಿಗೆ ಚಾಲನೆ ನೀಡೋಣವೆಂದು ಅಭಿಪ್ರಾಯಿಸಿದರು.

**ಈ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿದ ನಂತರ ತುಮಕೂರು ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆ ತಯಾರಿಸಲು ತಾಂತ್ರಿಕ ನೆರವು ಸಂಸ್ಥೆ ಸಹಕಾರ ಪಡೆಯಲು ನಿಯಮಾನುಸಾರ ಟೆಂಡರು ಕರೆದು ಅತಿ ಕಡಿಮೆ ಧರ ನಮೂದಿಸಿದ ತಾಂತ್ರಿಕ ನೆರವು ಸಂಸ್ಥೆಯ ಸಹಕಾರದೊಂದಿಗೆ ತುಮಕೂರು ಜಿಲ್ಲೆಯ ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆ ತಯಾರಿಸಲು ಸಭೆ ಅನುಮೋದಿಸಿತು.**

**(ಕ್ರಮ: ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್)**

**2) 2013-14ನೇ ಸಾಲಿನ ಜಿಲ್ಲಾ/ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಕಾರ್ಯಕ್ರಮಗಳ ವಾರ್ಷಿಕ ಕ್ರಿಯಾ ಯೋಜನೆ ಅನುಮೋದನೆ.**

ಮುಖ್ಯ ಯೋಜನಾಧಿಕಾರಿಗಳು ಮಾತನಾಡಿ,2013-14ನೇ ಸಾಲಿನ ಜಿಲ್ಲಾ ಪಂಚಾಯತ್ ವಾರ್ಷಿಕ ಕ್ರಿಯಾ ಯೋಜನೆ ದಿನಾಂಕ 17-06-2013ರ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಅನುಮೋದನೆಯಾಗಿದ್ದು, ಸದರಿ ಕ್ರಿಯಾ ಯೋಜನೆಯನ್ನು ಜಿಲ್ಲಾ ಯೋಜನಾ ಸಮಿತಿ ಅನುಮೋದನೆಗೆ ಮಂಡಿಸಿದ್ದು, ಸದರಿ ಕ್ರಿಯಾ ಯೋಜನೆಗೆ ಜಿಲ್ಲಾ ಯೋಜನಾ ಸಮಿತಿ ಅನುಮೋದನೆ ಕೋರಿದರು. ಮುಂದುವರೆದು ತಾಲ್ಲೂಕು ಪಂಚಾಯತ್‌ನ ಕ್ರಿಯಾ ಯೋಜನೆಗಳು ಇನ್ನೂ ಸಿದ್ದವಾಗಿಲ್ಲದ ಕಾರಣ ಸಮಿತಿಯಲ್ಲಿ ಮಂಡಿಸಲು ಸಾದ್ಯವಾಗಿಲ್ಲವೆಂದು ಸಭೆಗೆ ವಿವರಿಸಿದರು.

ಮಾನ್ಯ ಜಿಲ್ಲಾ ಯೋಜನಾ ಸಮಿತಿ ಸದಸ್ಯರುಗಳಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ ತಾಲ್ಲೂಕು ಪಂಚಾಯತ್ ಕ್ರಿಯಾ ಯೋಜನೆಗಳು ಈವರೆವಿಗೂ ಸಿದ್ದವಾಗಿಲ್ಲವೆಂದರೆ ಹೇಗೆ? ಅವುಗಳನ್ನು ಪೂರ್ಣಗೊಳಿಸುವುದು ಯಾವಾಗ? ಅವುಗಳನ್ನು ಜಿಲ್ಲಾ ಯೋಜನಾ ಸಮಿತಿ ಮುಂದೆ ಸಲ್ಲಿಸುವುದು ಯಾವಾಗ ಎಂದು ಪ್ರಶ್ನಿಸಿದರು? ಇದಕ್ಕೆ ಇತರೆ ಸದಸ್ಯರಾದ ಶ್ರೀ ಬಡೀರಣ್ಣ, ಡಾ: ರವಿ ಬಿ.ನಾಗರಾಜಯ್ಯ ಮತ್ತು ಶ್ರೀ ವೈ.ಹೆಚ್.ಹುಚ್ಚಯ್ಯ ಇವರುಗಳು ದನಿಗೂಡಿಸಿದರು. ಮಾನ್ಯ ಅಧ್ಯಕ್ಷರು ಮಾತನಾಡಿ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳ ಕ್ರಿಯಾ ಯೋಜನೆಗಳನ್ನು ಕೂಡಲೇ ಪೂರ್ಣಗೊಳಿಸಿ ಸಲ್ಲಿಸುವಂತೆ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾ ಅಧಿಕಾರಿಗಳಿಗೆ ಸೂಚಿಸಿದರು.

**ಇನ್ನು ಮುಂದಿನ ದಿನಗಳಲ್ಲಿ ಗ್ರಾಮ ಪಂಚಾಯತ್/ ತಾಲ್ಲೂಕು ಪಂಚಾಯತ್ ಗಳು ನೀಡುವ ಕ್ರಿಯಾ ಯೋಜನೆಯೊಂದಿಗೆ ಜಿಲ್ಲಾ ಪಂಚಾಯತ್ ಯೋಜನೆಯನ್ನು ಕ್ರೋಢೀಕರಿಸಿ ಯೋಜನಾ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕೆಂದು ಸಮಿತಿ ಸಭೆಯಲ್ಲಿ ತೀರ್ಮಾನಿಸಿ, 2013-14ನೇ ಸಾಲಿನ ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.**

**(ಕ್ರಮ: ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು)**

**3) 2013-14ನೇ ಸಾಲಿನ ನಗರ ಸ್ಥಳೀಯ ಸಂಸ್ಥೆಗಳ ವಾರ್ಷಿಕ ಕ್ರಿಯಾ ಯೋಜನೆಗಳ ಅನುಮೋದನೆ :**

ಮುಖ್ಯ ಯೋಜನಾಧಿಕಾರಿಗಳು ಮಾತನಾಡಿ, 2013-14ನೇ ಸಾಲಿನ ನಗರ ಸ್ಥಳೀಯ ಸಂಸ್ಥೆಗಳ ವಾರ್ಷಿಕ ಕ್ರಿಯಾ ಯೋಜನೆಗಳು ಸಮಿತಿಗೆ ಸ್ವೀಕೃತವಾಗಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಮಾನ್ಯ ಅಧ್ಯಕ್ಷರು ಮಾತನಾಡಿ 2013-14ನೇ ಸಾಲಿನ ನಗರ ಸ್ಥಳೀಯ ಸಂಸ್ಥೆಗಳ ಕ್ರಿಯಾ ಯೋಜನೆಗಳನ್ನು ಕೂಡಲೇ ತಯಾರಿಸಿ ಸಲ್ಲಿಸುವಂತೆ ಸಂಬಂಧಿಸಿದ ಅಧಿಕಾರಿಗೆ ಸೂಚಿಸಿದರು.

**ಸುದೀರ್ಘ ಚರ್ಚೆಯ ನಂತರ ಇನ್ನು ಮುಂದೆ ನಗರ ಸ್ಥಳೀಯ ಸಂಸ್ಥೆಗಳು ವಾರ್ಷಿಕ ಕ್ರಿಯಾ ಯೋಜನೆಗಳನ್ನು ನಿಗಧಿತ ಸಮಯದಲ್ಲಿ ತಯಾರಿಸಬೇಕು ಹಾಗೂ ಪ್ರಸಕ್ತ ಸಾಲಿನ ಕ್ರಿಯಾ ಯೋಜನೆಗಳನ್ನು ಕೂಡಲೇ ತಯಾರಿಸಿ ಮುಂದಿನ ಜಿಲ್ಲಾ ಯೋಜನಾ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆಯುವಂತೆ ಸೂಚಿಸಲಾಯಿತು .**

**(ಕ್ರಮ:ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು)**

**4) ತುಮಕೂರು ಜಿಲ್ಲೆಯ ಮಾನವ ಅಭಿವೃದ್ಧಿ ತಯಾರಿಕೆ ಪ್ರಗತಿ ಕುರಿತು ಚರ್ಚೆ.**

ಡಾ:ಕೀರ್ತಿಶೇಖರ್, ನಿರ್ದೇಶಕರು, ಐ.ಐ.ಡಿ.ಸಿ ಇವರು ಸಭೆಗೆ ವಿವರ ನೀಡುತ್ತಾ ಜಿಲ್ಲಾ ಮಾನವ ಅಭಿವೃದ್ಧಿ ವರದಿಯನ್ನು ಪ್ರಪ್ರಥಮವಾಗಿ 1990ರಲ್ಲಿ ವಿಶ್ವಸಂಸ್ಥೆ ಅಂಗಸಂಸ್ಥೆಯಾದ United Nations Development programme ವತಿಯಿಂದ ತಯಾರಿಸಲಾಯಿತು. ಈ ವರದಿ ತಯಾರಿಕೆಯಲ್ಲಿ ವಿಶ್ವದ 182 ರಾಷ್ಟ್ರಗಳು ತೊಡಗಿದ್ದು ಭಾರತವು ಮುಂಚೂಣಿ ಯಲ್ಲಿದೆ. ಭಾರತವು ಈವರೆವಿಗೆ ಎರಡು ವರದಿಗಳನ್ನು ತಯಾರಿಸಿದ್ದು, ಕರ್ನಾಟಕವು ಮೊದಲನೇ ವರದಿಯನ್ನು 1999ರಲ್ಲಿ ಹಾಗೂ ಎರಡನೇ ವರದಿಯನ್ನು 2005ರಲ್ಲಿ ತಯಾರಿಸಿರುತ್ತದೆ ಎಂದರು.

ಮುಂದುವರೆದು ಮಾತನಾಡಿ ತುಮಕೂರು ಜಿಲ್ಲೆಯಲ್ಲಿ ಜಿಲ್ಲಾ ಮಾನವ ಅಭಿವೃದ್ಧಿ ಯೋಜನೆಯ ಪ್ರಥಮ ವರದಿಯನ್ನು ತಯಾರಿಸಲು ಕ್ರಮ ಕೈಗೊಂಡಿದ್ದು ಈವರೆಗೆ ಜಿಲ್ಲಾ ಮಟ್ಟದಲ್ಲಿ ಕಾರ್ಯಾಗಾರವನ್ನು ನಡೆಸಿ ಇಲಾಖಾವಾರು ವಿವರಗಳನ್ನು ನಿಗದಿತ ನಮೂನೆಗಳಲ್ಲಿ ಸಂಗ್ರಹಿಸಲಾಗಿದೆ. ಚುನಾವಣೆ ನಿಮಿತ್ತ ಜಿಲ್ಲಾ ಮಾನವ ಅಭಿವೃದ್ಧಿ ವರದಿ ತಯಾರಿಕೆ ಪ್ರಕ್ರಿಯೆಯಲ್ಲಿ ವಿಳಂಬವಾಗಿದ್ದು, ಈಗ ತಾಲ್ಲೂಕು ಮಟ್ಟದಲ್ಲಿ ಕಾರ್ಯಾಗಾರಗಳನ್ನು

ನಡೆಸಬೇಕಾಗಿರುತ್ತದೆ. ಈ ಸಂಬಂಧ ಜಿಲ್ಲಾ ಮಟ್ಟದಲ್ಲಿ ಕೋರ್ ಸಮಿತಿ ಮತ್ತು ಉಪ ಸಮಿತಿಗಳನ್ನು ರಚಿಸಲಾಗಿದ್ದು, ಈ ಸಮಿತಿಗಳು ಸಭೆಗಳನ್ನು ನಡೆಸಿ ತಮ್ಮ ಕಾರ್ಯ ವ್ಯಾಪ್ತಿ ಬಗ್ಗೆ ಚರ್ಚಿಸಿ, ಕೆಲವು ಆದ್ಯತಾ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ಷ್ಮ ಅಧ್ಯಯನಗಳನ್ನು ಕೈಗೊಳ್ಳುವಂತೆ ನಿರ್ಣಯಿಸುತ್ತವೆ. ಅದರಂತೆ ಸೂಕ್ಷ್ಮ ಅಧ್ಯಯನಗಳನ್ನು ಕೈಗೊಳ್ಳುವಂತೆ ನಿರ್ಣಯಿಸುತ್ತವೆ. ಅದರಂತೆ ಸೂಕ್ಷ್ಮ ಅಧ್ಯಯನಗಳನ್ನು ಕೈಗೊಂಡು ವರದಿಯಲ್ಲಿ ಸೇರ್ಪಡೆ ಮಾಡಬೇಕಾಗಿರುತ್ತದೆ. ತಾಲ್ಲೂಕು ಮಟ್ಟದಲ್ಲಿ ಕಾರ್ಯಾಗಾರಗಳನ್ನು ನಡೆಸಿದ ನಂತರ ಗ್ರಾಮ ಪಂಚಾಯಿತಿವಾರು ಸೂಚ್ಯಂಕಗಳಿಗೆ ಮಾಹಿತಿಯನ್ನು ಸಂಗ್ರಹಿಸಬೇಕಾಗಿರುತ್ತದೆ ಎಂದರು.

ಮಾನವ ಅಭಿವೃದ್ಧಿ ವರದಿಯನ್ನು ಮುಖ್ಯವಾಗಿ ಶಿಕ್ಷಣ ಸೂಚ್ಯಂಕ, ಆರೋಗ್ಯ ಸೂಚ್ಯಂಕ ಮತ್ತು ಆದಾಯ ಸೂಚ್ಯಂಕಗಳನ್ನು ಆಧರಿಸಿ ತಯಾರಿಸುವುದರಿಂದ ಜಿಲ್ಲೆಯ ಶೈಕ್ಷಣಿಕ, ಆರೋಗ್ಯ ಮತ್ತು ಆದಾಯ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ. ಆದುದರಿಂದ ಎಲ್ಲಾ ಇಲಾಖೆಗಳು ಈ ಮೂರು ಸೂಚ್ಯಂಕಗಳ ಕ್ರೋಢೀಕರಣಕ್ಕಾಗಿ ಮಾಹಿತಿಯನ್ನು ಸಲ್ಲಿಸಬೇಕಾಗಿರುತ್ತದೆ ಎಂದರು. ತುಮಕೂರು ಜಿಲ್ಲೆಯ ಪ್ರಥಮ ವರದಿಯನ್ನು ವರ್ಷಾಂತ್ಯದೊಳಗೆ ತಯಾರಿಸಿ ಜಿಲ್ಲಾ ಯೋಜನಾ ಸಮಿತಿಯ ಮುಂದೆ ಮಂಡಿಸಿ, ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ ಸಂಬಂಧಿಸಿದ ಇಲಾಖೆಗಳು ಈ ಪ್ರಕ್ರಿಯೆಯಲ್ಲಿ ಪರಿಣಾಮಕಾರಿಯಾಗಿ ಸಲಹೆಗಳನ್ನು ನೀಡುವುದರ ಜೊತೆಗೆ ಇಲಾಖೆಯ ನಿಖರ ಅಂಕಿ ಅಂಶಗಳನ್ನು ಶೀಘ್ರಗತಿಯಲ್ಲಿ ನೀಡುವಂತೆ ಕೋರಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ ತಯಾರಿಕೆ ಬಹಳ ಮಹತ್ವದ್ದಾಗಿರುತ್ತದೆ. ಇದರಿಂದ ಜಿಲ್ಲೆಯ ಶೈಕ್ಷಣಿಕ ಪರಿಸ್ಥಿತಿ, ಆರೋಗ್ಯ ಪರಿಸ್ಥಿತಿ ಮತ್ತು ಆದಾಯ ಪರಿಸ್ಥಿತಿಗಳನ್ನು ಗುರುತಿಸಿ ಇವುಗಳ ಸುಧಾರಣೆಗೆ ವರದಿ ಆಧಾರವಾಗುವುದರಿಂದ ಎಲ್ಲಾ ಇಲಾಖಾ ಅಧಿಕಾರಿಗಳಿಗೆ ಈ ಪ್ರಕ್ರಿಯೆಯಲ್ಲಿ ಯಶಸ್ವಿಯಾಗಿ ಪಾಲ್ಗೊಳ್ಳುವಂತೆ ಸೂಚಿಸಿ ಇಲಾಖಾ ಅಂಕಿ ಅಂಶಗಳನ್ನು ತ್ವರಿತವಾಗಿ ನೀಡುವಂತೆ ಸೂಚಿಸಿದರು.

**(ಕ್ರಮ: ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು)**

**5) ಗದಗ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನ ಕುರಿತು ಜಿಲ್ಲಾ ಯೋಜನಾ ಸಮಿತಿ ಸದಸ್ಯರು ಅಧ್ಯಯನ ಪ್ರವಾಸ ಕೈಗೊಳ್ಳುವ ಬಗ್ಗೆ ಅನುಮೋದನೆ.**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ ತುಮಕೂರು ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಫ್ಲೋರೈಡ್ ಅಂಶವಿದ್ದು ನೀರು ಕುಡಿಯಲು ಯೋಗ್ಯವಿರುವುದಿಲ್ಲ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ನಿರ್ದೇಶನದ ಮೇರೆಗೆ ಗದಗ ಜಿಲ್ಲೆಯ ಹುಲಕೋಟಿ ಗ್ರಾಮದಲ್ಲಿ ಅನುಷ್ಠಾನಗೊಳಿಸಿರುವ ಡೀಫ್ಲೋರೈಡೇಷನ್ ಘಟಕವನ್ನು ಅಧಿಕಾರಿಗಳ ತಂಡದೊಂದಿಗೆ ವೀಕ್ಷಣೆ ಮಾಡಲು ಭೇಟಿ ನೀಡಿದ್ದೆವು. ಆ ಘಟಕದಲ್ಲಿ 5000-10000 ಲೀಟರ್ ಸಿಂಟೆಕ್ಸ್ ಟ್ಯಾಂಕ್ ಇಡಲಾಗಿದೆ, ಇದು 24X7 (Any Time Water) ರಂತೆ ಒಂದು ರೂಪಾಯಿ ನಾಣ್ಯ ಹಾಕಿದರೆ 10 ಲೀಟರ್ ಶುದ್ದ ಕುಡಿಯುವ ನೀರು ಬರುತ್ತದೆ . ಹಾಗೂ

ಇದರಿಂದ ಬಿಡುಗಡೆಯಾದ ಅನುಪಯುಕ್ತ ನೀರನ್ನು ಮರು ಉಪಯೋಗಿಸಲು ಕ್ರಮ ಕೈಗೊಳ್ಳಲಾಗಿದೆ, ಎರಡನೆಯದಾಗಿ 10 ಎಕರೆ ಜಾಗದಲ್ಲಿ ಸ್ಮಶಾನ ಮಾಡಿದ್ದು, ಈ ಸ್ಮಶಾನದಲ್ಲಿ ಎಲ್ಲಾ ಜನಾಂಗದವರು ಆಯಾಯ ಧರ್ಮಕ್ಕನುಗುಣ ವಾಗಿ ಅಂತ್ಯಕ್ರಿಯೆ ಮಾಡಲು ವ್ಯವಸ್ಥೆ ಮಾಡಿ ಅವಕಾಶ ಕಲ್ಪಿಸಲಾಗಿದೆ, ಈ ಎಲ್ಲಾ ಕಾರ್ಯಕ್ರಮಗಳನ್ನು ಮಾನ್ಯ ಜಿಲ್ಲಾ ಯೋಜನಾ ಸಮಿತಿ ಸದಸ್ಯರು ವೀಕ್ಷಿಸಲು ಅಧ್ಯಯನ ಪ್ರವಾಸ ಕೈಗೊಳ್ಳುವ ಉದ್ದೇಶಕ್ಕಾಗಿ ಸಭೆಯ ಅನುಮೋದನೆಗೆ ಟಿಪ್ಪಣಿ ಮಂಡಿಸಿದೆ ಎಂದರು.

**ಸುದೀರ್ಘ ಚರ್ಚೆಯ ನಂತರ ಗದಗ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳ ವೀಕ್ಷಣೆ ಮಾಡಲು ಜಿಲ್ಲಾ ಯೋಜನಾ ಸಮಿತಿ ಸದಸ್ಯರು ಅಧ್ಯಯನ ಪ್ರವಾಸ ಕೈಗೊಳ್ಳುವಂತೆ ಸಮಿತಿಯು ತೀರ್ಮಾನಿಸಿತು. ಹಾಗೂ ಈ ಪ್ರವಾಸ ಕಾರ್ಯಕ್ರಮದ ರೂಪುರೇಷೆಗಳನ್ನು ಅಂತಿಮಗೊಳಿಸಿ ದಿನಾಂಕ ನಿಗಧಿಪಡಿಸುವ ಸಂಬಂಧ ವಿಷಯವನ್ನು ಮಾನ್ಯ ಅಧ್ಯಕ್ಷರ ವಿವೇಚನೆಗೆ ಬಿಡಲು ಸಭೆಯಲ್ಲಿ ತೀರ್ಮಾನಿಸಿತು.**

ಕೊರಟಗೆರೆ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಮಾತನಾಡಿ ಕಳೆದ 10 ವರ್ಷಗಳಿಂದ ಜಿಲ್ಲಾ ಯೋಜನೆ ಸಮಿತಿ ಸಭೆಗಳು ನಡೆಯುತ್ತಿವೆ, ಆದರೆ ಇದುವರೆಗೂ ಯಾವುದೇ ಪ್ರಯೋಜನವಾಗಿಲ್ಲ. ನಗರ/ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಕ್ರಿಯಾ ಯೋಜನೆಯನ್ನು ರೂಪಿಸಿ ಜಿಲ್ಲಾ ಮಟ್ಟದ ಜಿಲ್ಲಾ ಯೋಜನಾ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು ಅನುಷ್ಠಾನ ಮಾಡಿದ ಯಾವುದೇ ಉದಾಹರಣೆಗಳು ಇಲ್ಲ. ಇದರಿಂದ ಜಿಲ್ಲಾ ಯೋಜನಾ ಸಮಿತಿಯ ಉದ್ದೇಶ ಫಲಕಾರಿಯಾಗಿಲ್ಲವೆಂದು ತಿಳಿಸಿದರು. ಮುಂದುವರೆದು ಜಿಲ್ಲಾ ಯೋಜನಾ ಸಮಿತಿಯಲ್ಲಿ ಉಪ ಸಮಿತಿಗಳನ್ನು ಸಹ ರಚನೆ ಮಾಡಿಲ್ಲವೆಂದು ಹಾಗೂ ನಿಗದಿತ ಅವಧಿಯಲ್ಲಿ ಸಭೆಗಳನ್ನು ನಡೆಸಿರುವುದಿಲ್ಲ, ಇನ್ನು ಮುಂದೆ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆಯನ್ನು ನಡೆಸಲು ಸೂಚಿಸಿ, ಉಪ ಸಮಿತಿಗಳನ್ನು ರಚಿಸಲು ಕೋರಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ ಕರ್ನಾಟಕ ಪಂಚಾಯತ್ ರಾಜ್ ಆಕ್ಟ್ 1993 ಸೆಕ್ಷನ್ 310ರ ಪ್ರಕಾರ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಿಬೇಕೆಂದು ತಿಳಿಸಲಾಗಿದೆ. ಅದರಂತೆ ದಿನಾಂಕ10/05/1993 ರಿಂದ ಜಿಲ್ಲಾ ಯೋಜನಾ ಸಮಿತಿಯು ಜಾರಿಗೆ ಬಂದಿದೆ. ಜಿಲ್ಲಾ ಯೋಜನಾ ಸಮಿತಿಗೆ ಜಿಲ್ಲಾ ಪಂಚಾಯಿತಿಯ ಮಾನ್ಯ ಅಧ್ಯಕ್ಷರು ಅಧ್ಯಕ್ಷರಾಗಿದ್ದು, ಸ್ಥಳೀಯ ನಗರಸಭೆಯ ಅಧ್ಯಕ್ಷರು ಉಪಾಧ್ಯಕ್ಷರಾಗಿ ರುತ್ತಾರೆ. ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯ ಪ್ರಕಾರ ಯೋಜನೆಗಳು ಗ್ರಾಮ/ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಮಟ್ಟದಲ್ಲಿ ಮಾತ್ರವಲ್ಲದೇ ನಗರ ಸ್ಥಳೀಯ ಸಂಸ್ಥೆಗಳ ಲ್ಲಿಯೂ ರೂಪಿತವಾಗಿ ಜಿಲ್ಲಾ ಮಟ್ಟದಲ್ಲಿ ಕ್ರೋಢೀಕೃತವಾಗಬೇಕಾಗುತ್ತದೆ. ಜಿಲ್ಲೆಯಾದ್ಯಂತ ಸ್ಥಳೀಯ ಸಂಸ್ಥೆಗಳು ರೂಪಿಸುವ ಕ್ರಿಯಾ ಯೋಜನೆಗಳು ಇತರೆ ಸ್ಥಳೀಯ ಸಂಸ್ಥೆಗಳಿಗೆ ತಿಳಿಯುವುದಿಲ್ಲ. ಇದರಿಂದ ಕೈಗೊಳ್ಳುವ ಕಾಮಗಾರಿಗಳು ಎರಡೆರಡು ಕಡೆ ಸೇರಿಕೊಳ್ಳುವ ಸಾದ್ಯತೆಗಳು ಇರುತ್ತವೆ, ಪ್ರಯುಕ್ತ ಈ ಎಲ್ಲಾ ಕ್ರಿಯಾ ಯೋಜನೆಗಳು ಒಂದೇ ಕಡೆ ಬಂದು ಒಂದು ಸಮಗ್ರ ಕ್ರಿಯಾ ಯೋಜನೆಯಾಗಿ ಸಮಿತಿಯಲ್ಲಿ ಅನುಮೋದನೆ ಆಗಬೇಕಾಗಿದೆ. ಹಾಗೇಯೇ ವಿಶೇಷ ಅನುದಾನಗಳು, ಸಂಸದರು/ಶಾಸಕರು ಅನುದಾನಗಳು ಒಳಗೊಂಡಿರುತ್ತವೆ.

ಯಾವುದೇ ಸಂಸ್ಥೆಯ ಕ್ರಿಯಾ ಯೋಜನೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾದ ನಂತರ ಅದನ್ನು ಬದಲಾಯಿಸಲು ಸಾಧ್ಯವಿಲ್ಲ, ಆದರೆ ಜಿಲ್ಲಾ ಯೋಜನಾ ಸಮಿತಿಯಲ್ಲಿ ಮರು ಪರಿಶೀಲನೆ ಮಾಡಬಹುದು ಹಾಗೂ ವಿನೂತನ ಯೋಜನೆಗಳನ್ನು ಸಮಿತಿಯ ಮೂಲಕ ಅನುಷ್ಠಾನ ಗೊಳಿಸಬಹುದು ಎಂದು ತಿಳಿಸಿದರು. ಕೇರಳ ರಾಜ್ಯದಲ್ಲಿ ಜಿಲ್ಲಾ ಯೋಜನಾ ಸಮಿತಿಯು ಪ್ರಬಲವಾಗಿದ್ದು, ಗ್ರಾಮ ಪಂಚಾಯಿತಿಯಲ್ಲಿ ರೂ. 75.00 ಲಕ್ಷ ರಿಂದ ರೂ. 1.00 ಕೋಟಿವರೆಗೆ ಸ್ವಂತ ಸಂಪನ್ಮೂಲದ ಮೂಲಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ಸ್ವಂತ ಸಂಪನ್ಮೂಲ ಇಲ್ಲದ ಕಾರಣ ವಾರ್ಷಿಕ ವಂತಿಕೆ ರೂಪದಲ್ಲಿ ಸಂಪನ್ಮೂಲ ಕ್ರೋಢೀಕರಿಸಿ ವಿನೂತನ ಯೋಜನೆಗಳನ್ನು ಅನುಷ್ಠಾನ ಮಾಡಲು ಬಳಸಿಕೊಳ್ಳಬಹುದೆಂದು ತಿಳಿಸಿದರು.

**ಸುದೀರ್ಘ ಚರ್ಚೆಯ ನಂತರ ಜಿಲ್ಲಾ ಯೋಜನಾ ಸಮಿತಿಯನ್ನು ಬಲಗೊಳಿಸಲು ಆಗತ್ಯ ಕ್ರಮವಹಿಸಲು ಹಾಗೂ ಪ್ರತಿ ಮೂರು ತಿಂಗಳಿಗೊಮ್ಮೆ ಜಿಲ್ಲಾ ಯೋಜನಾ ಸಮಿತಿ ಸಭೆಯನ್ನು ನಡೆಸಲು ಹಾಗೂ ಉಪ ಸಮಿತಿಗಳನ್ನು ರಚಿಸಲು ತೀರ್ಮಾನಿಸಲಾಯಿತು.**

ಈ ಸಂಬಂಧ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ ಈ ಕೆಳಕಂಡಂತೆ ಸೂಚನೆಗಳನ್ನು ನೀಡಿದರು.

1) ಜಿಲ್ಲೆಯ ಎಲ್ಲಾ ನಗರ/ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಕಡ್ಡಾಯವಾಗಿ ಪ್ರತಿ ವರ್ಷ ವಂತಿಕೆ ನೀಡುವಂತೆ ಸೂಚಿಸಿ, ಈ ಸಂಬಂಧ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಪತ್ರ ಬರೆಯುವಂತೆ ಮುಖ್ಯ ಯೋಜನಾಧಿಕಾರಿಗಳಿಗೆ ಸೂಚಿಸಿದರು.
2) ಜಿಲ್ಲೆಯ ಎಲ್ಲಾ ನಗರ/ಗ್ರಾಮೀಣ ಸ್ಥಳೀಯ ಸಂಸ್ಥೆಗಳು ತಮ್ಮ ವಾರ್ಷಿಕ ಕ್ರಿಯಾ ಯೋಜನೆಗಳನ್ನು ಸಕಾಲದಲ್ಲಿ ಸಿದ್ದಪಡಿಸಿ, ಜಿಲ್ಲಾ ಯೋಜನೆ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ಸೂಚಿಸಿದರು.
3) ಜಿಲ್ಲಾ ಪಂಚಾಯಿತಿ ಕಛೇರಿ ಕಟ್ಟಡದ 2ನೇ ಮಹಡಿಯಲ್ಲಿ ಜಿಲ್ಲಾ ಯೋಜನಾ ಸಮಿತಿ ಘಟಕ ನಿರ್ಮಾಣ ಮಾಡಲು ಮತ್ತು ಜಿಲ್ಲಾ ಪಂಚಾಯಿತಿ ಕಛೇರಿ ಕಟ್ಟಡದಲ್ಲಿ ಮಳೆ ನೀರು ಕೊಯ್ಲು ಮೂಲಕ ಶುದ್ಧ ಕುಡಿಯುವ ನೀರು ಪಡೆಯಲು ಘಟಕ ಸ್ಥಾಪಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

**(ಕ್ರಮ:ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು)**

ಚರ್ಚಿಸತಕ್ಕ ವಿಷಯಗಳು ಮುಕ್ತಾಯವಾದ್ದರಿಂದ ಮುಖ್ಯ ಯೋಜನಾಧಿಕಾರಿಗಳ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

ಸಹಿ/-

**(ಪ್ರೇಮಾ ಮಹಾಲಿಂಗಪ್ಪ)**

ಅಧ್ಯಕ್ಷರು, ಜಿಲ್ಲಾ ಪಂಚಾಯತ್, ತುಮಕೂರು

ಹಾಗೂ ಅಧ್ಯಕ್ಷರು,ಜಿಲ್ಲಾ ಯೋಜನಾ ಸಮಿತಿ

10

ಸಂ.ಜಿಪಂತು/ಯೋಶಾ/ಜಿ.ಯೋ.ಸ-2 /2013-14 ದಿನಾಂಕ:08-08-2013

<u>ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ:-</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ನಂ.116, 1ನೇ ಮಹಡಿ, 1ನೇ ಗೇಟ್, ಬಹುಮಹಡಿ ಕಟ್ಟಡ, ಬೆಂಗಳೂರು.
3. ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯತ್, ತುಮಕೂರು.
4. ಜಿಲ್ಲೆಯ ಮಾನ್ಯ ಎಲ್ಲಾ ಲೋಕಸಭಾ ಹಾಗೂ ರಾಜ್ಯಸಭಾ ಸದಸ್ಯರುಗಳಿಗೆ
5. ಮಾನ್ಯ ಅಧ್ಯಕ್ಷರು, ನಗರಸಭೆ, ತುಮಕೂರು ಹಾಗೂ ಉಪಾಧ್ಯಕ್ಷರು, ಜಿಲ್ಲಾ ಯೋಜನಾ ಸಮಿತಿ.
6. ಜಿಲ್ಲೆಯ ಮಾನ್ಯ ಎಲ್ಲಾ ವಿಧಾನ ಸಭಾ ಶಾಸಕರು/ ವಿಧಾನ ಪರಿಷತ್ ಸದಸ್ಯರು
7. ಜಿಲ್ಲಾ ಪಂಚಾಯತ್ ಕ್ಷೇತ್ರದಿಂದ ಆಯ್ಕೆಯಾದ ಮಾನ್ಯ ಎಲ್ಲಾ ಯೋಜನಾ ಸಮಿತಿ ಸದಸ್ಯರುಗಳಿಗೆ
8. ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು.
9. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು.

ಪ್ರತಿಯನ್ನು ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿಗಾಗಿ ರವಾನಿಸುತ್ತಾ, ಅಂಶಗಳಿಗೆ ದಿನಾಂಕ:15-8-2013 ರೊಳಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಕೋರಿದೆ.

1. ಉಪ ಕಾರ್ಯದರ್ಶಿ(ಆಡಳಿತ), ಜಿಲ್ಲಾ ಪಂಚಾಯತ್, ಇವರ ಆಪ್ತ ಶಾಖೆಗೆ.
2. ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯತ್, ಇವರ ಆಪ್ತ ಶಾಖೆಗೆ.
3. ಯೋಜನಾ ನಿರ್ದೇಶಕರು,ಡಿಆರ್ ಡಿಎ ಜಿಲ್ಲಾ ಪಂಚಾಯತ್, ತುಮಕೂರು
4. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು
5. ಯೋಜನಾ ನಿರ್ದೇಶಕರು(ನಗರಾಭಿವೃದ್ಧಿ ಕೋಶ) ಸ್ಥಳೀಯ ಸಂಸ್ಥೆಗಳ ಕೋಶ, ಜಿಲ್ಲಾಧಿಕಾರಿಗಳ ಕಛೇರಿ,ತುಮಕೂರು
6. ಆಯುಕ್ತರು, ನಗರಸಭೆ, ತುಮಕೂರು/ತಿಪಟೂರು/ಶಿರಾ
7. ಭೂಸ್ವಾಧೀನ ಅಧಿಕಾರಿ, ಮಿನಿವಿಧಾನಸೌಧ, ತುಮಕೂರು.
8. ಉಪ ವಿಭಾಗಾಧಿಕಾರಿ, ತುಮಕೂರು/ತಿಪಟೂರು/ಮಧುಗಿರಿ
9. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ತುಮಕೂರು.
10. ನಗರ ಯೋಜನೆಯ ಸಹಾಯಕ ನಿರ್ದೇಶಕರು, ತುಮಕೂರು.
11. ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ.
12. ವ್ಯವಸ್ಥಾಪಕರು, ಪರಿಶಿಷ್ಟ ಜಾತಿ/ ಪ.ವರ್ಗಗಳ ಅಭಿವೃದ್ಧಿ ನಿಗಮ.
13. ವ್ಯವಸ್ಥಾಪಕರು, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ತುಮಕೂರು
14. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ತುಮಕೂರು.
15. ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ.
16. ಜಿಲ್ಲೆಯ ಎಲ್ಲಾ ಪುರಸಭೆ/ಪಟ್ಟಣ ಪಂಚಾಯಿತಿಗಳ ಮುಖ್ಯಾಧಿಕಾರಿಗಳಿಗೆ.
17. ಅಧೀಕ್ಷಕ ಅಭಿಯಂತರರು, ಬೆಸ್ಕಾಂ, ತುಮಕೂರು.
18. ಕಛೇರಿ ಪ್ರತಿ.

ಮುಖ್ಯ ಯೋಜನಾಧಿಕಾರಿಗಳು,
ಜಿಲ್ಲಾ ಪಂಚಾಯತ್, ತುಮಕೂರು